# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 23.08.2011**

## *ಗಣೇಶ ಹಬ್ಬದ ಪ್ರಯುಕ್ತ ಪಾಲಿಕೆಯಿಂದ ಪೂರ್ವಭಾವಿ ಸಿದ್ಧತೆ*

ರಾಜ್ಯಾದ್ಯಂತ ಸಡಗರ ಸಂಭ್ರಮಗಳಿಂದ ಆಚರಿಸಲಿರುವ ಗೌರಿ-ಗಣೇಶ ಹಬ್ಬಗಳನ್ನು ಮುಖ್ಯವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಗಣೇಶ ಚತುರ್ಥಿಯನ್ನು ಸಡಗರ ಸಂಭ್ರಮದ ಜೊತೆಗೆ ಪರಿಸರ ಸ್ನೇಹಿಯಾಗಿ, ಕೆರೆಗಳನ್ನು ಸಂರಕ್ಷಿಸುವ ಜೊತೆಗೆ ಅರ್ಥಪೂರ್ಣವಾಗಿ ಆಚರಿಸಬೇಕೆಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿ, ಗಣೇಶ ಮೂರ್ತಿಯ ವಿಸರ್ಜನೆಯ ಸಂದರ್ಭದಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು.

1) ಗಣೇಶ ಮೂರ್ತಿಯ ವಿಸರ್ಜನೆಯನ್ನು ಪಾಲಿಕೆಯ ಹಲಸೂರು ಕೆರೆ, ಸ್ಯಾಂಕಿ ಕೆರೆ, ಯಡಿಯೂರು ಕೆರೆ, ಸಾಣೆಗುರುವನಹಳ್ಳಿ ಕೆರೆಗಳಲ್ಲಿ ವಿಶೇಷವಾಗಿ ನಿರ್ಮಿಸಿರುವ ಪುಷ್ಕರಣಿಗಳಲ್ಲಿ ಮಾತ್ರ ವಿಗ್ರಹಗಳ ವಿಸರ್ಜನೆಯನ್ನು ಮಾಡುವುದು. ಅದಲ್ಲದೇ ಹೊಸ ವಲಯಲದಲ್ಲಿ ಗುರುತಿಸಲಾದ 26 ಕೆರೆಗಳಲ್ಲಿ ಗಣೇಶ ವಿಸರ್ಜನೆ ಮಾಡಬಹುದಾಗಿದೆ.
2) ಸಾರ್ವಜನಿಕರ ಅನುಕೂಲಕ್ಕಾಗಿ ಈ ಬಾರಿ ಕೂಡಾ ಗಣೇಶ ಮೂರ್ತಿಯ ವಿಸರ್ಜನಾ 63 ಸಂಚಾರಿ ಘಟಕಗಳನ್ನು ಸ್ಥಾಪಿಸಲಾಗಿದ್ದು, ಈ ಘಟಕಗಳಲ್ಲಿ ಕಡಿಮೆ ಎತ್ತರದ ಮೂರ್ತಿಗಳನ್ನು ವಿಸರ್ಜಿಸಬಹುದು.
3) ವಿಗ್ರಹವನ್ನು ವಿಸರ್ಜನೆ ಮಾಡಲು ಕೆರೆಯನ್ನು ಪ್ರವೇಶಿಸುವಾಗ ಪ್ರವೇಶ ದ್ವಾರಗಳ ಮೂಲಕವೇ ಪ್ರವೇಶಿಸುವುದು.
4) ಗಣೇಶ ಮೂರ್ತಿಯ ವಿಸರ್ಜನೆಯನ್ನು ವಿಶೇಷವಾಗಿ ರೂಪಿಸಿರುವ ಪುಷ್ಕರಣಿಯಲ್ಲೇ ವಿಸರ್ಜಿಸಬೇಕು. ಕೆರೆಯ ಬೇರಾವುದೇ ಭಾಗದಲ್ಲಿ ವಿಸರ್ಜನೆ ನಿಷೇಧಿಸಲಾಗಿದೆ.
5) ಪೂಜೆಗಾಗಿ ಮತ್ತು ಇತರೆ ಕಾರ್ಯಗಳಿಗೆ ಬಳಸಿರುವ ಹೂವು, ಹಾರ, ಬಾಳೆದಿಂಡು, ಮಾವಿನ ಸೊಪ್ಪು ಇತ್ಯಾದಿ ವಸ್ತುಗಳನ್ನು ಕೆರೆಯ ಪ್ರವೇಶ ದ್ವಾರದ ಪಕ್ಕದಲ್ಲಿ ಇಟ್ಟಿರುವ ಕಸದ ಸಂಗ್ರಹಣಾ ಕಂಟೈನರ್‌ಗಳಲ್ಲಿ ಹಾಕುವುದು.
6) ವಿಸರ್ಜನೆಯ ಸ್ಥಳದಲ್ಲಿ ನೂಕು ನುಗ್ಗಲು ಸಂಭವಿಸುವುದನ್ನು ತಡೆಯಲು ಸಾರ್ವಜನಿಕರು ಸರದಿ ಸಾಲನ್ನು ಅನುಸರಿಸುವುದು.
7) ಸಾರ್ವಜನಿಕರು ಮೂರ್ತಿ ವಿಸರ್ಜನೆಯ ಸಮಯದಲ್ಲಿ ಪಾಲಿಕೆ ಹಾಗೂ ಪೊಲೀಸರ ಮಾರ್ಗಸೂಚನೆಗಳನ್ನು ಪಾಲಿಸುವುದು.
8) ಕೆರೆಯ ನೀರನ್ನು ಮಲಿನಗೊಳಿಸುವ ವಿಷಯುಕ್ತ ಬಣ್ಣಗಳ ಲೇಪನದ ಮೂರ್ತಿಗಳನ್ನು ಖರೀದಿಸಬೇಡಿ.
9) ಗಣೇಶ ಮೂರ್ತಿಯ ವಿಸರ್ಜನೆಯ ವೇಳೆಯಲ್ಲಿ ಕೆರೆಯ ಬಳಿ ಪಟಾಕಿ ಸಿಡಿಸುವುದು, ಧ್ವನಿವರ್ಧಕಗಳನ್ನು ಬಳಸುವುದು ನಿಷೇಧಿಸಲಾಗಿದೆ.
10) ರಾತ್ರಿ 10.30ರ ನಂತರ ಗಣೇಶ ಮೂರ್ತಿಯನ್ನು ನಿಗದಿ ಪಡಿಸಿರುವ ಪುಷ್ಕರಣಿಗಳಲ್ಲಿಯೂ ಸಹ ವಿಸರ್ಜನೆ ಮಾಡಲು ಅವಕಾಶ ಇರುವುದಿಲ್ಲ.
11) ಶುಚಿತ್ವದ ಬಗ್ಗೆ ಗಮನಹರಿಸಿ ನಗರ ಪಾಲಿಕೆಯೊಂದಿಗೆ ಸಹಕರಿಸುವುದು.
12) ಬಣ್ಣದ ಲೇಪನ ಮಾಡಿದ ಮೂರ್ತಿಗಳನ್ನು ಪುಷ್ಕರಣಿಗಳಲ್ಲಿ ಬಿಡುವುದರಿಂದ ನೀರು ಕಲುಷಿತಗೊಂಡು ನೀರಿನಿಂದ ಉಂಟಾದ ವಾಸನೆಯಿಂದ ಸಾರ್ವಜನಿಕರಿಗೆ ತೊಂದರೆಯಾಗಬಹುದು. ಪುಷ್ಕರಣಿಯಲ್ಲಿ ಹೂಳೆತ್ತುವವರೆಗೆ ಸಾರ್ವಜನಿಕರು ಪಾಲಿಕೆಯೊಂದಿಗೆ ಸಹಕರಿಸಲು ಕೋರಿದೆ.
13) ಪ್ರತಿಯೊಂದು ವಿಸರ್ಜನಾ ಕೇಂದ್ರಗಳಲ್ಲಿ ಪಾಳಿಯೊಂದರಲ್ಲಿ ಸ್ವಯಂಸೇವಾ ಸಂಘದವರ ಸಹಾಯದಿಂದ ನುರಿತ ಈಜುಗಾರರನ್ನು ಹಾಗೂ ಅಗತ್ಯ ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಳ್ಳಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**